(ಸದನವು ಮಧ್ಯಾಹ್ನ 1.45ಕ್ಕೆ ಭೋಜನ ವಿರಾಮಕ್ಕಾಗಿ ಮುಂದೂಡಲ್ಪಟ್ಟಿತು)

(ಮತ್ತೆ ಸಭೆಯು ಮಧ್ಯಾಹ್ನ 3.00ಗಂಟೆಗೆ ಪುನರ್ ಸಮಾವೇಶಗೊಂಡಿತು ಸಭಾಧ್ಯಕ್ಷರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)

5. ಪ್ರಮಾಣ ವಚನ ಸ್ವೀಕಾರ

ಶ್ರೀ ರವಿಕಾಂತ ಪಾಟೀಲ್ : ಇಂಡಿ ವಿಧಾನಸಭಾ ಕ್ಷೇತ್ರ

6. ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಳ(ಮುಂದು)

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ಈ ರಾಜ್ಯದ ಮತ್ತು ದೇಶದ ರೈತರ ಪರಿಸ್ಥಿತಿ ಬಗ್ಗೆ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಯಾವ ರೀತಿಯಾಗಿ ಕೆಲಸ ಮಾಡುತ್ತಿದೆ. ಇವರ ಆದ್ಯತೆ ಏನು ಎಂಬ ಬಗ್ಗೆ ನಾನು ಬಹಳ ಕುತೂಹಲದಿಂದ ನೋಡುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರನ್ನು ಜನರು five-star, elitist, Aristocrat ಎಂದು ಕರೆಯುವಂಥಾದ್ದು ವಾಡಿಕೆ ಇದೆ. ಇವರ ಅಭಿರುಚಿಗೆ ತಕ್ಕಂತೆ ಈ ದೇಶದ ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಏನು ತಪ್ಪು ಮಾಡಿದ್ದಾರೆಂದರೆ ವ್ಯವಸಾಯವನ್ನು ಬಿಟ್ಟು ಕೈಗಾರಿಕೆಗೆ ಒತ್ತು ಕೊಡುವಂತಹ ತಪ್ಪು ಹಾಗೂ ಅಪರಾಧವಾಗಿದೆ. ಈ ಅಪರಾಧವನ್ನೆ ಮುಂದುವರೆಸಿಕೊಂಡು ಹೋಗುವಂತಹ ಪ್ರಯತ್ನವನ್ನು ಮಾನ್ಯ ಮುಖ್ಯಮಂತ್ರಿಯವರು ಮಾಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಟಿ.ವಿ.ಯಲ್ಲಿ ಸಂದರ್ಶನ ನೀಡಿದ್ದನ್ನು ನೋಡಿದೆ. ಅವರು ಏನು ಹೇಳಿದ್ದಾರೆಂದರೆ ಬ್ಯುರೊಕ್ರಾಟ್ಸ್ ಇಂಡಸ್ಟ್ರಿಯಲಿಸ್ಟ್ಸ್ ಅನ್ನು ಅದರಲ್ಲೂ ಸಾಫ್ಟ್‌ವೇರ್ ಸೆಕ್ಟಾರ್‌ನಲ್ಲಿರುವವರನ್ನು they have hundred reasons not to meet industralists but I will tell them I have thousand reasons to meet them personally,- ಎಂದು ಹೇಳಿದ್ದಾರೆ. but it is most unfortunate, ಒಬ್ಬ ರೈತನಾಗಿ ನಾನು ಹೇಳಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ರೈತನನ್ನು ಭೇಟಿ ಮಾಡುತ್ತೇವೆಂದು ಹೇಳಲಿಲ್ಲ. ಅವರು ಇಂಡಸ್ಟ್ರಿಯಲಿಸ್ಟ್ಸ್ ಅನ್ನು ಭೇಟಿ ಮಾಡುತ್ತೇನೆನ್ನುವಂತಹ ಮಾತನ್ನು ಹೇಳಿದ್ದಾರೆಯೇ ವಿನಃ ರೈತನ ಕಣ್ಣೀರನ್ನು ಒರೆಸುತ್ತೇನೆಂದು ಹೇಳಿಲ್ಲ. ಅವರು ರೈತ ಮನೆತನದವರಾಗಿರುವವರು, ನಾನು ಅವರಿಂದ ಈ ರೀತಿಯಾಗಿ ನಿರೀಕ್ಷೆ ಮಾಡಿರಲಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಆಲೋಚನೆ, ಚಿಂತನೆ, ಎಲ್ಲವೂ ಈ ರಾಜ್ಯದ, ದೇಶದ ರೈತರ ಬಗ್ಗೆ ಇರಬೇಕಾಗಿತ್ತು. ಆ ದೃಷ್ಟಿಯನ್ನು ಇನ್ನು ಮುಂದಾದರೂ ತಾವು ದಯಮಾಡಿ ಬೆಳೆಸಿಕೊಳ್ಳಬೇಕೆಂದು ಹೇಳುತ್ತೇನೆ. ರೈತರು ಈ ದೇಶಕ್ಕೆ ಅನ್ನ, ಬಟ್ಟೆ ಕೊಡುವಂಥವರು, ಈ ಸಮಾಜವನ್ನು ಸೃಷ್ಟಿ ಮಾಡುವವರಾಗಿದ್ದಾರೆ. ಆದರೂ ಈ 52-53 ವರ್ಷಗಳಿಂದ ಅಭಿವೃದ್ಧಿಯ ಪ್ರತಿಫಲ ಏನಾಗಿದೆ ಎಂದರೆ ಅವನಿಗೆ ಈ ಭೂಮಿಯ ಮೇಲೆ ಜೀವನ ಸಾಕು, ನನ್ನ ಉಸಿರು ಕೊನೆಗೊಳಿಸಬೇಕು, ಈ ಭೂಮಿಯ ಮೇಲೆ ಭಾರವಾಗಿ